ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1978.

# *ಬಾಪ್ ದಾದಾರವರ ಸೇವೆಗೆ ಫಲಿತಾಂಶ*

(बाप-दादा की सेवा का रिटर्न)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸದಾ ಅತೀಂದ್ರಿಯ ಸುಖ ಅಥವಾ ಸಂತೋಷದ ಉಯ್ಯಾಲೆಯಲ್ಲಿ ತೂಗಿಸುವವರು, ಸುಖಸಾಗರನಾದ ಶಿವತಂದೆ ಮಾತನಾಡುತ್ತಿದ್ದಾರೆ.**

ಇಂದು ಸ್ಮತಿಯ ದಿವಸ ಎಂದರೆ ಸಾಮರ್ಥ್ಯ ದಿವಸದಂದು ಎಲ್ಲಾ ಮಕ್ಕಳು ನಿಮ್ಮ ನಿಮ್ಮ ಸಂಬಂಧದ ಅನುಸಾರವಾಗಿ ಭಿನ್ನ ಭಿನ್ನ ರೂಪದಿಂದ ನೆನಪು ಮಾಡಿದಿರಿ, ಬಾಪ್‌ದಾದಾರವರ ಬಳಿ ನಾಲ್ಕೂ ಕಡೆಯ ಸ್ನೇಹಿ, ಸಹಯೋಗಿ ಶಕ್ತಿಸ್ವರೂಪ, ಸಂಪರ್ಕವುಳ್ಳ ಆತ್ಮರ ಎಲ್ಲಾ ರೂಪದ ನೆನಪು ಸೂಕ್ಷ್ಮಲೋಕದವರೆಗೆ ತಲುಪಿತು. ಬಾಪ್‌ದಾದಾರವರ ಮೂಲಕ ಪ್ರತಿಯೊಬ್ಬ ಮಗುವಿಗೆ ಎಂತಹ ನೆನಪೋ ಅಂತಹ ಪ್ರತಿಫಲವು ಅದೇ ಸಮಯದಲ್ಲಿ ದೊರೆತು ಬಿಡುತ್ತದೆ. ಯಾವ ರೂಪದಿಂದ ಯಾರು ನೆನಪು ಮಾಡುತ್ತಾರೋ ಅದೇ ರೂಪದಿಂದ ಬಾಪ್‌ದಾದಾ ಮಕ್ಕಳ ಮುಂದೆ ಪ್ರತ್ಯಕ್ಷರಾಗಿಯೇ ಬಿಡುತ್ತಾರೆ. ಯಾರು ಯೋಗಿ ಆತ್ಮರಿದ್ದಾರೆಯೋ ಅವರಿಗೆ ಯೋಗದ ವಿಧಿ ಸೆಕ್ಕುಬಿಡುತ್ತದೆ. ಕೆಲವೊಂದು ಮಕ್ಕಳು ಯೋಗಿ ಆತ್ಮರಾಗುವ ಬದಲಾಗಿ ವಿಯೋಗಿ ಆತ್ಮರಾಗಿಬಿಡುತ್ತಾರೆ. ಆ ಕಾರಣದಿಂದಲೇ ಮಿಲನದ ಬದಲು ದೂರವಾಗುವಂತಹ ಅನುಭವವನ್ನು ಮಾಡುತ್ತಾರೆ. ಯೋಗಿ ಆತ್ಮವು ಸದಾ ಬಾಪ್‌ದಾದಾರವರ ಹೃದಯ ಸಿಂಹಾಸನಕ್ಕೆ ಅಧಿಕಾರಿ ಆಗಿರುತ್ತದೆ. ತಂದೆಯ ಹೃದಯವು ಎಂದಿಗೂ ದೂರ ಇರುವುದಿಲ್ಲ. ವಿಯೋಗಿ ಆತ್ಮರು ವಿಯೋಗದ ಮೂಲಕ ಬಾಪ್‌ದಾದಾರವರನ್ನು ತಮ್ಮ ಎದುರಿನಲ್ಲಿ ತರುವ ಪ್ರಯತ್ನ ಮಾಡುತ್ತಾರೆ. ವರ್ತಮಾನವನ್ನು ಮರೆತು ನಡೆದು ಹೋಗಿದ್ದನ್ನು ನೆನಪು ಮಾಡುತ್ತಾರೆ. ಈ ಕಾರಣದಿಂದ ಬಾಪ್‌ದಾದಾ ಒಮ್ಮೆ ಪ್ರತ್ಯಕ್ಷದಲ್ಲಿ ಕಂಡುಬರುತ್ತಾರೆ ಒಮ್ಮೆ ಪರದೆಯ ಒಳಗೆ ಮರೆಯಾಗಿರುವಂತೆ ಕಂಡುಬರುತ್ತಾರೆ. ಆದರೆ ಬಾಪ್‌ದಾದಾ ಸದಾ ಮಕ್ಕಳಿಂದ ಬಚ್ಚಿಟ್ಟುಕೊಳ್ಳಲಾಗುವುದಿಲ್ಲ. ತಂದೆಯು ಮಕ್ಕಳ ಸಲುವಾಗಿಯೇ ಇಲ್ಲಿ ಇರುವುದರಿಂದ ಎಲ್ಲಿಯವರೆಗೆ ಮಕ್ಕಳ ಸ್ಥಾಪನೆಯ ಕರ್ತವ್ಯದ ಪಾತ್ರ ಇದೆಯೋ ಅಲ್ಲಿಯತನಕ ಬಾಪ್‌ದಾದಾ ಮಕ್ಕಳ ಪ್ರತಿಯೊಂದು

ಸಂಕಲ್ಪ ಹಾಗೂ ಕ್ಷಣ ಜೊತೆ ಜೊತೆಗೆ ಇರುತ್ತಾರೆ. ಜೊತೆಯಲ್ಲಿ ಹೋಗೋಣ ಎನ್ನುವುದು ತಂದೆಯ ಪ್ರತೀಜ್ಞೆಯಾಗಿದೆ. ಹೋಗುವ ಕಾರ್ಯವು ಸಮಾಪ್ತಿಯಾಗದಿದ್ದಾಗ ಮೊದಲೇ ತಂದೆಯನ್ನು ಏಕೆ ಕಳುಹಿಸಿಬಿಡುತ್ತೀರಿ? ತಂದೆಯು ಹೋಗಿಬಿಟ್ಟರು ಎಂದು ಹೇಳಿ ಅವಿನಾಶಿ ಸಂಬಂಧವನ್ನು ವಿನಾಶಿ ಆಗಿ ಏಕೆ ಮಾಡಿಕೊಳ್ಳುತ್ತೀರಿ. ಕೇವಲ ಪಾತ್ರವು ಪರಿವರ್ತನೆ ಆಗಿದೆ. ಹೇಗೆ ನೀವೂ ಸಹ ಸೇವಾಸ್ಥಾನವನ್ನು ಬದಲಾವಣೆ ಮಾಡುತ್ತೀರಲ್ಲವೇ ಹಾಗೆಯೇ ಬ್ರಹ್ಮಾಬಾಬಾರವರೂ ಸೇವಾಸ್ಥಾನವನ್ನು ಬದಲಾವಣೆ ಮಾಡಿದ್ದಾರೆ. ರೂಪವೂ ಅದೇ, ಸೇವೆಯೂ ಅದೇ. ಸಾವಿರ ಭುಜಗಳುಳ್ಳ ಬ್ರಹ್ಮಾರವರ ರೂಪದ ಪಾತ್ರವು ವರ್ತಮಾನ ಸಮಯದಲ್ಲಿ ನಡೆಯುತ್ತಾ ಇದೆ. ಆದ್ದರಿಂದಲೇ ಸಾಕಾರ ಸೃಷ್ಟಿಯಲ್ಲಿ ಈ ರೂಪದ ಸ್ಥಿತಿ ಹಾಗೂ ಸ್ಮೃತಿಚಿಹ್ನೆ(ಸ್ಮಾರಕ) ಇದೆ. ಭುಜಗಳು ತಂದೆಯ ಹೊರತು ಕರ್ತವ್ಯ ಮಾಡುವುದಕ್ಕೆ ಸಾಧ್ಯವಿಲ್ಲ ಭುಜಗಳು ತಂದೆಯನ್ನು ಪ್ರತ್ಯಕ್ಷ ಮಾಡುತ್ತಿದ್ದಾರೆ. ಮಾಡಿಸುವವರು ಇರುವ ಕಾರಣ ಮಾಡುತ್ತಿದಾರೆ. ಹೇಗೆ ಆತ್ಮನ ವಿನಹ ಬುಜ ಏನು ಮದುವುದಕ್ಕೆ ಸದ್ಯವಿಲ್ಲವೋ ಅದೇ ರೀತಿ ಬಾಪ್‌ದಾದಾ ಕಂಬೈಡ್ ರೂಪದ ಆತ್ಮನ ವಿನಹ ಬುಜ ರೂಪಿ ಮಕ್ಕಳು ಏನೂ ಮಾಡುವುದಕ್ಕೆ ಸಾದ್ಯವಿಲ್ಲ. ಪ್ರತೀ ಕಾರ್ಯದಲ್ಲಿ ಅಂತ್ಯದವರೆಗೆ ಮೊದಲಿನ ಕಾರ್ಯದ ಭಾಗವು ಬ್ರಹ್ಮಾರವರದಾಗಿರುತ್ತದೆ. ಬ್ರಹ್ಮಾ ಎಂದರೆ ಆದಿದೇವ. ಆದಿದೇವ ಎಂದರೆ ಪ್ರತಿಯೊಂದು ಶುಭಕಾರ್ಯದ ಆದಿಯನ್ನು ಮಾಡುವವರು. ಬಾಪ್‌ದಾದಾ ಆದಿಯನ್ನು ಮಾಡದಿದ್ದರೆ ಎಂದರೆ ಪ್ರಾರಂಭ ಮಾಡದಿದ್ದರೆ ಯಾವುದೇ ಕಾರ್ಯವು ಹೇಗೆ ಸಫಲವಾಗಲು ಸಾಧ್ಯವಿದೆ? ಪ್ರತಿಯೊಂದು ಕಾರ್ಯದಲ್ಲಿ ಮೊದಲು ತಂದೆಯ ಸಹಯೋಗ ಇದೆ. ಇದರ ಅನುಭವವೂ ನಿಮಗೆ ಇದೆ. ವರ್ಣನೆಯನ್ನೂ ಮಾಡುತ್ತೀರಿ. ಆದರೂ ಸಹ ಒಮ್ಮೊಮ್ಮೆ ಮರೆತುಬಿಡುತ್ತೀರಿ. ಪ್ರೇಮದ ಸಾಗರನ ಪ್ರೇಮದ ಅಲೆಗಳಲ್ಲಿ ಏನಾಗಿಬಿಡುತ್ತೀರಿ. ಅಲೆಗಳೊಂದಿಗೆ ಆಟವಾಡಬೇಕೇ ಹೊರತು ಅಲೆಗಳ ವಶ ಆಗಬಾರದು. ಗುಣಗಾನ ಮಾಡಿರಿ, ಆದರೆ ಗಾಯಗೊಳ್ಳಬೇಡಿರಿ. ತಂದೆಯು ನೋಡುತ್ತಿದ್ದಾರೆ ಮಕ್ಕಳು ನನ್ನ ಜೊತೆಗಾರರಾಗಿದ್ದಾರೆಯೇ ಎನ್ನುವುದನ್ನು ಮತ್ತು ದೂರವಾಗುವ ಪರದೆ ಹಾಕಿ ನೋಡುತ್ತಿರುತ್ತಾರೆಯೇ? ಹುಡುಕುವುದರಲ್ಲಿ ಸಮಯವನ್ನು ಕಳೆಯುತ್ತಾರೆ. ಪ್ರತ್ಯಕ್ಷದಲ್ಲಿ ಹಾಜರಿರುವವರನ್ನೂ ಸಹ ಮರೆಮಾಡಿಬಿಡುತ್ತಾರೆ. ಒಂದು ವೇಳೆ ಕಣ್ಣುಮುಚ್ಚಾಲೆ ಆಟವು ನಿಮಗೆ ಪ್ರಿಯವನಿಸಿದರೆ ಅದನ್ನು ಆಟವೆಂದು ತಿಳಿದು ಆಟವಾಡಿರಿ, ಆದರೆ ಅದರ ಸ್ವರೂಪ ಆಗಿಬಿಡಬೇಡಿರಿ. ಮನೊರಂಜನೆಯ ಮಾತುಗಳನ್ನು ನಿಮಗೆ ಹೇಳುತ್ತಿಲ್ಲ. ಸೇವೆಯ ವೇಗವನ್ನು ಇನ್ನೂ ತೀವ್ರಗೊಳಿಸುವ ಸಲುವಾಗಿ ಕೇವಲ ಸ್ಥಾನ ಪಲ್ಲಟ ಮಾಡಿದ್ದಾರೆ. ಆದ್ದರಿಂದ ಮಕ್ಕಳೂ ಸಹ ತಂದೆಯ ಸಮಾನ ಸೇವೆಯ ವೇಗವನ್ನು ತೀವ್ರಗೊಳಿಸುವುದರಲ್ಲಿ ತತ್ಪರರಾಗಿರಬೇಕು. ಇದು ಸ್ನೇಹದ ಪ್ರತಿಕ್ರಿಯೆ ಆಗಿದೆ. ಮಕ್ಕಳಿಗೆ ತಂದೆಯ ಜೊತೆಯಲ್ಲಿ ಸೇವೆಯೊಂದಿಗೂ ಸಹ ಸ್ನೇಹ ಇದೆ, ಸೇವೆಯೊಂದಿಗೆ ಇರುವ ಸ್ನೇಹವೇ ತಂದೆಯ ಸ್ನೇಹದ ಪ್ರತ್ಯಕ್ಷ ಸ್ವರೂಪವಾಗಿದೆ. ಹೇಗೆ ಕ್ಷಣ ಕ್ಷಣವೂ ತಂದೆ ತಂದೆ ಎಂದು ಕರೆಯುತ್ತೀರೋ ಹಾಗೆಯೇ ಪ್ರತಿಯೊಂದು ಕ್ಷಣವೂ ತಂದೆ ಹಾಗೂ ಸೇವೆಯೇ ಬುದ್ಧಿಯಲ್ಲಿರಬೇಕು. ಆಗ ಮಾತ್ರ ಸೇವೆಯ ಕಾರ್ಯವು ಸಮಾಪ್ತಿ ಆಗುವುದು ಹಾಗೂ ಜೊತೆಯಲ್ಲಿ ಬರುವಿರಿ, ಈಗಂತೂ ಬಾಪ್‌ದಾದಾ ಪ್ರತಿಯೊಂದು ಮಗುವನ್ನೂ ಲೈಟ್‌ಹೌಸ್(ಪ್ರಕಾಶಸ್ವರೂಪ) ಹಾಗೂ ಮೈಟ್‌ಹೌಸ್(ಶಕ್ತಿಸ್ವರೂಪ) ರೂಪದಲ್ಲಿ ನೋಡುತ್ತಿದ್ದಾರೆ. ಮೈಕಂತೂ(ವಾಚಾ) ಶಕ್ತಿಶಾಲಿ ಆಗಿಬಿಟ್ಟಿದೆ. ಆದರೆ ಲೈಟ್, ಮೈಟ್ ಮತ್ತು ಮೈಕ್ ಇವು ಮೂರೂ ಜೊತೆ ಜೊತೆಗೆ ಶಕ್ತಿಶಾಲಿ ಆಗಬೇಕು. ಮಾತಿನಲ್ಲಿ ಬರುವುದು ಸಹಜ ಎನಿಸುತ್ತದೆ ಅಲ್ಲವೇ. ಪ್ರತಿಯೊಂದು ಆತ್ಮಕ್ಕೂ ಶಾಂತಿ, ಸುಖ ಪವಿತ್ರತೆಯ ಮೂರೂ ಕಿರಣಗಳನ್ನು ನಿಮ್ಮ ಶಕ್ತಿಯಿಂದ ನೀಡಲು ಸಾಧ್ಯವಾಗುವಂತೆ ಅಂತಹ ಶಕ್ತಿಶಾಲಿ ಸ್ಥಿತಿಯನ್ನು ಈಗ ರೂಪಿಸಿಕೊಳ್ಳಿರಿ. ಹೇಗೆ ಸಾಕಾರಿ ಸೃಷ್ಟಿಯಲ್ಲಿ ಯಾವ ಬಣ್ಣದ ದೀಪವನ್ನು ಉರಿಸುತ್ತೀರೋ, ನಾಲ್ಕೂ ಕಡೆಯೂ ಅದೇ ವಾತಾವರಣವಾಗಿಬಿಡುತ್ತದೆ. ಅಲ್ಲವೇ. ಒಂದು ವೇಳೆ ಹಸಿರುದೀಪವಾಗಿದ್ದರೆ ನಾಲ್ಕೂ ಕಡೆ ಅದೇ ಪ್ರಕಾಶವು ಹರಡುತ್ತದೆ. ಒಂದೇ ಸ್ಥಾನದಲ್ಲಿ ಇದ್ದರೂ ಸಹ ಒಂದು ದೀಪವು ವಾತಾವರಣವನ್ನು ಬದಲು ಮಾಡಿಬಿಡುತ್ತದೆ. ಹೇಗೆ ನೀವೂ ಕೆಂಪು ದೀಪವನ್ನು ಉರಿಸಿದಾಗ ತಾನಾಗಿಯೇ ಸ್ಮೃತಿಯ ವಾಯುಮಂಡಲವು ರೂಪುಗೊಳ್ಳುತ್ತದೆಯೋ. ಹಾಗೆಯೇ ಸ್ಥೂಲ ದೀಪವೇ ವಾಯುಮಂಡಲವನ್ನು ಪರಿವರ್ತನೆ ಮಾಡಬಹುದಾದ ಲೈಟ್ ಹೌಸ್ ಆದ ನೀವು ಪವಿತ್ರತೆಯ ಬೆಳಕಿನಿಂದ ಅಥವಾ ಸುಖದ ಬೆಳಕಿನಿಂದ ವಾಯುಮಂಡಲವನ್ನು ನಿರ್ಮಿಸಲಾರಿರಾ? ಸ್ಥೂಲ ಬೆಳಕನ್ನು ಕಣ್ಣುಗಳಿಂದ ನೋಡುತ್ತೀರಿ. ಆತ್ಮದ ಬೆಳಕನ್ನು

ಅನುಭವದಿಂದ ಅರಿತುಕೊಳ್ಳುವಿರಿ. ವರ್ತಮಾನ ಸಮಯದಲ್ಲಿ ಈ ಆತ್ಮಿಕ ದೀಪಗಳ ಮೂಲಕ ವಾಯುಮಂಡಲವನ್ನು ಪರಿವರ್ತನೆ ಮಾಡುವ ಸೇವೆಯನ್ನು ಮಾಡಬೇಕಾಗಿದೆ. ಈಗ ಸೇವೆಯ ಯಾವ ರೂಪವು ಆಗಬೇಕು ಎನ್ನುವುದನ್ನು ಕೇಳಿದಿರಾ? ಎರಡೂ ಸೇವೆಗಳು ಜೊತೆ ಜೊತೆಯಲ್ಲಿ ನಡೆಯಬೇಕು. ಮೈಟ್ ಮತ್ತು ಮೈಕ್ ಜೊತೆ ಇದ್ದರೆ ಸಹಜವಾಗಿ ಸಫಲತಾಮೂರ್ತಿ ಆಗಿಬಿಡುಏರಿ.

**ತಂಡಗಳೊಂದಿಗೆ.**

(I) ಪಾರಲೌಕಿಕ ತಂದೆಯೂ ಸಹ ಲೌಕಿಕ ಕ್ರಮಸಂಖ್ಯೆಯನ್ನು ಉಪಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ತಂದೆ ಹಾಗೂ ಮಕ್ಕಳ ಮಿಲನವು ಹಗಲೂ ರಾತ್ರಿ ಏಕೆ ನಡೆಯಬೇಕು? ನಿಮ್ಮ ಪ್ರಪಂಚದಲ್ಲಿ ಈ ಎಲ್ಲಾ ಪ್ರಶ್ನೆಗಳೂ ಬರುತ್ತವೆ. ಆದರೆ ಅಲ್ಲಿ ಎಲ್ಲರೂ ತಂದೆಯ ಸಮೀಪದಲ್ಲಿ ಇರುತ್ತೀರಿ. ಬಿಂದುವು ಎಷ್ಟು ಸ್ಥಳವನ್ನು ತೆಗೆದುಕೊಳ್ಳುವುದು. ಇಲ್ಲಿಯಾದರು ಶರೀರಕ್ಕೆ ಸ್ಥಳವು ಬೇಕಾಗುತ್ತದೆ. ಅಲ್ಲಿ ಸಮೀಪ ಆಗಿಯೇಬಿಡುವಿರಿ. ಇಲ್ಲಿ ಪ್ರತಿಯೊಂದು ಆತ್ಮವೂ ನಮ್ಮ ತಂದೆಯ ಸಮೀಪಕ್ಕೆ ಬರಬೇಕೆಂದು ಅಂದುಕೊಳ್ಳುತ್ತದೆ. ಯಾರು ಎಷ್ಟು ತಂದೆಯ ಗುಣಗಳಲ್ಲಿ ತಮ್ಮ ಸ್ಥಿತಿಯಲ್ಲಿ ಸಮೀಪ ಆಗಿದ್ದೀರೋ ಅಷ್ಟು ಅಲ್ಲಿ ಸ್ಥಾನದಲ್ಲಿ ಸಮೀಪ ಆಗುತ್ತೀರಿ. ಎಂದರೆ ಮನೆಯಲ್ಲಿಯೇ ಆಗಲಿ ಅಥವಾ ರಾಜ್ಯದಲ್ಲಿಯೇ ಆಗಲಿ ಸಮೀಪ ಆಗುತ್ತೀರಿ. ಸ್ಥಿತಿಯು ಸ್ಥಾನದ ಸಮೀಪಕ್ಕೆ ಕರೆದೊಯ್ಯುತ್ತದೆ. ಆಶ್ಚರ್ಯ ಏನೆಂದರೆ ಪ್ರತಿಯೊಬ್ಬರೂ ನಾನು ಸಮೀಪ ಆಗಿದ್ದೇನೆ ಎಂದು ತಿಳಿದುಕೊಳ್ಳುತ್ತೀರಿ ಹಾಗೂ ಸಮೀಪದ ಅನುಭವವನ್ನೂ ಮಾಡುತ್ತೀರಿ. ಏಕೆಂದರೆ ಪಾರಲೌಕಿಕ ತಂದೆಯು ಅಕ್ಷಯ ಹಾಗೂ ಅಖಂಡ ಆಗಿದ್ದಾನೆ. ಆದ್ದರಿಂದ ಎಲ್ಲೂ ಸಮೀಪ ಆಗಬಹುದು. ಸಂತುಷ್ಟರಾಗಿರಬೇಕು ಹಾಗೂ ಸಂತುಷ್ಟರನ್ನಾಗಿ ಮಾಡಬೇಕು ಎನ್ನುವುದೇ ವರ್ತಮಾನ ಸಮಯದ ಆದರ್ಶವಾಕ್ಯವಾಗಿದೆ. ಅಸಂತುಷ್ಟ ಎಂದರೆ ಅಪಾಪ್ತಿ ಸಂತುಷ್ಟ ಎಂದರೆ ಪ್ರಾಪ್ತಿ. ಆದ್ದರಿಂದ ಸರ್ವಪಾಪ್ತಿ ಉಳ್ಳವರು ಎಂದಿಗೂ ಅಸಂತುಷ್ಟರಾಗಿರುವುದು ಅಸಂಭವ.

(2) ಸದಾ ನಿಮ್ಮನ್ನು ಈಶ್ವರೀಯ ವಿದ್ಯಾರ್ಥಿ ಎಂದು ತಿಳಿದುಕೊಂಡು ನಡೆಯುತ್ತೀರಾ? ಈಶ್ವರೀಯ ವಿದ್ಯಾರ್ಥಿಜೀವನವು ಎಲ್ಲಕ್ಕಿಂತಲೂ ಶ್ರೇಷ್ಠವಾದುದು ಎಂದು ಪ್ರತೀತಿ ಇದೆ. ಹೇಗೆ ಸದಾ ಶ್ರೇಷ್ಠ (ಬೆಸ್ಟ್) ಜೀವನದ ಅನುಭವವನ್ನು ಮಾಡುತ್ತೀರುತ್ತೀರೋ, ಹೇಗೆ ಅವರಿಗೆ ಸದಾ ನಗುತ್ತಾ ಆಟವಾಡುತ್ತಾ ಕಲಿಯುತ್ತಾ ಇರುತ್ತಾರೋ ಹಾಗೂ ಅವರಿಗೆ ಯಾವುದೇ ಪ್ರಸಂಗವು ಬುದ್ಧಿಯಲ್ಲಿ ವಿಘ್ನರೂಪ ಆಗುವುದಿಲ್ಲವೋ ಹಾಗೆಯೇ ಕಲಿಯುವುದು, ಕಲಿಸುವುದು, ನಿರ್ವಿಘ್ನರಾಗಿರುವುದು, ತಂದೆಯ ಜೊತೆಯಲ್ಲಿ ಏಳುವುದು, ಕುಳಿತುಕೊಳ್ಳುವುದು, ಆಹಾರ ಪಾನೀಯವನ್ನು ಸ್ವೀಕರಿಸುವುದು ಈಶ್ವರೀಯ ವಿದ್ಯಾರ್ಥಿ ಜೀವನ ಆಗಿದೆ. ಲೌಕಿಕದಲ್ಲಿ ಇರುತ್ತಿದ್ದರೂ ಸಹ ತಂದೆಯ ಜೊತೆ ಇದೆ ಅಲ್ಲವೇ. ಶರೀರವು ಎಲ್ಲಿಯಾದರೂ ಇರಲಿ ಆದರೆ ಮನಸ್ಸು ತಂದೆ ಹಾಗೂ ಸೇವೆಯಲ್ಲಿ ಮಗ್ನವಾಗಿರಲಿ, ಊಟ ಮಾಡುವುದು ನಡೆದಾಡುವುದು ಎಲ್ಲವೂ ತಂದೆಯ ಜೊತೆಯಲ್ಲಿ ಮಾಡುವುದೇ ಮಹಿಮೆ ಆಗಿದೆ. ಯಾವುದು ಪ್ರಿಯ ವಸ್ತು ಆಗಿರುತ್ತದೆಯೋ ಅದರ ಜೊತೆಯನ್ನು ತೊರೆಯುವುದು ಕಷ್ಟವಾಗುವುದಲ್ಲವೇ. ಜೊತೆಯಲ್ಲಿ ಇರುವುದು ಯೋಗವನ್ನು ಇಡುವುದು ಕಷ್ಟವಲ್ಲ. ಯೋಗವು ಕಡಿದುಹೋಗುವುದು ಕಷ್ಟ, ಇಂತಹ ಅನುಭವವನ್ನೇ ಈಶ್ವರೀಯ ವಿದ್ಯಾರ್ಥಿ ಜೀವನ ಎಂದು ಕರೆಯಲಾಗುತ್ತದೆ. ಇದನ್ನು ಬಿಡುವುದು ಕಡಿದುಹಾಕುವುದು ಕಷ್ಟ ಅಂದರೆ ಜೊತೆಗೆ ಇರುವುದು ಕಷ್ಟವಲ್ಲ. ಇದೇ ಅತಿಶ್ರೇಷ್ಠ ಜೀವನ ಆಗಿದೆ. ಸದಾ ನಗುತ್ತಾ ಇರಿ, ಹಾಡುತ್ತಾ ಇರಿ ಹಾಗೂ ತಂದೆಯ ಜೊತೆಯಲ್ಲಿ ನಡೆಯುತ್ತಾ ಇರಿ. ಇಂತಹ ಜೊತೆಯು ಇಡೀ ಕಲ್ಪದಲ್ಲಿ ಮತ್ತೆ ಯಾವಾಗಲೂ ದೊರೆಯಲಾರದು. ಸಂಗಮಯುಗದಲ್ಲಿಯೂ ಸಹ ಒಂದು ವೇಳೆ ಬೇರೆಯಾರನ್ನಾದರೂ ಹುಡುಕಿದರೆ ಸಿಗುವರೇನು? ತಂದೆಯು ನಿಮ್ಮನ್ನು ಹುಡುಕಿದೆನೋ ಅಥವಾ ನೀವು ತಂದೆಯನ್ನು ಹುಡುಕಿದಿರೋ? ನೀವೂ ಸಹ ಹುಡುಕುತ್ತಲೇನೋ ಇದ್ದಿರಿ ಆದರೆ ತಪ್ಪು ಮಾರ್ಗವನ್ನು ಹಿಡಿದಿದ್ದಿರಿ. ನೀವು ಹುಡುಕಿದ್ದು ತಂದೆಯನ್ನು ಹಾಗೂ ಹುಡುಕಿ ಪಡೆದುದು ಸಹೋದರರನ್ನು. ಆದ್ದರಿಂದ ತಂದೆಯನ್ನು ಪಡೆಯುವುದು ಸಾಧ್ಯವಾಗಲಿಲ್ಲ

(3) ಸ್ವಯಂನ ಪುರುಷಾರ್ಥದಲ್ಲಿ ಹಾಗೂ ಸೇವೆಯಲ್ಲಿ ಸದಾ ವೃದ್ಧಿ ಆಗುತ್ತಿರಬೇಕಾದರೆ ಸಹಜವಾದ ಸಾಧನವು ಯಾವುದಾಗಿದೆ. ವೃದ್ಧಿಯ ಸಾಧನ ಯಾವುದೆಂದರೆ ಅಮೃತ ವೇಳೆಯಿಂದ ಹಿಡಿದು ವಿಧಿ ಪೂರ್ವಕವಾಗಿ ನಡೆದುಕೊಳ್ಳುವುದು. ವಿಧಿಪೂರ್ವಕ ಜೀವನವು ಉನ್ನತಿಯನ್ನು ಪಡೆಯುವುದು. ಯಾವುದೇ ಕಾರ್ಯವು ಯಾವಾಗ ಸಫಲ ಆಗುವುದು ಎಂದರೆ ವಿಧಿಪೂರ್ವಕವಾಗಿ ಮಾಡಿದಾಗ, ಬ್ರಾಹ್ಮಣರು ಎಂದರೆ ವಿಧಿಪೂರ್ವಕ ಜೀವನ ನಡೆಸುವವರು. ಒಂದು ವೇಳೆ ಯಾವುದೇ ವಿಷಯದಲ್ಲಿ ಸ್ವಯಂ ನಿಮ್ಮ ಪುರುಷಾರ್ಥ ಅಥವಾ ಸೇವೆಯಲ್ಲಿ ವೃದ್ಧಿ ಆಗದಿದ್ದರೆ ಅವಶ್ಯವಾಗಿ ಯಾವುದೋ ವಿದಿಯ ಕೊರತೆ ಇದೆ ಎಂದು ತಿಳಿಯಿರಿ. ಅಮೃತವೇಳೆಯಿಂದ ಮೊದಲಾಗಿ ರಾತ್ರಿಯವರೆಗೆ ಮನ, ವಚನ, ಕರ್ಮ ಹಾಗೂ ಸಂಪರ್ಕವು ವಿಧಿಪೂರ್ವಕವಾಗಿ ಇತ್ತೇ ಎಂದರೆ ವೃದ್ಧಿ ಆಯಿತೇ ಎಂದು ನೋಡಿಕೊಳ್ಳಿರಿ. ಒಂದು ವೇಳೆ ಹಾಗಿಲ್ಲದಿದ್ದರೆ ಕಾರಣವನ್ನು ಹುಡುಕಿ ನಿವಾರಣೆ ಮಾಡಿಕೊಳ್ಳಿರಿ. ಆಗ ನಿರಾಶರಾಗುವುದಿಲ್ಲ. ಒಂದು ವೇಳೆ ನಿಮ್ಮ ಜೀವನವು ವಿಧಿಪೂರ್ವಕವಾಗಿ ನಡೆಯುತ್ತಿದ್ದರೆ ವೃದ್ಧಿಯು ಅವಶ್ಯವಾಗಿ ಆಗುವುದು. ಒಳ್ಳೆಯದು.

ಅವ್ಯಕ್ತ ಮುರಳಿ 18-01-1978.

***ಬಾಪ್‌ದಾದಾರವರ ಸೇವೆಯ ಫಲಿತಾಂಶ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ತಂದೆಯ ಹೃದಯ ಸಿಂಹಾಸನಾಧಿಕಾರಿಯಾಗಿ ಇರುವ ಯೋಗಿ.

2. ನಾನು ತಂದೆಯ ಸಮಾನವಾಗಿ ಸೇವೆಯನ್ನು ತೀವ್ರ ಮಾಡುವುದರಲ್ಲಿ ತತ್ಪರವಾಗಿದ್ದು ಸ್ನೇಹದ ರಿಟರ್ನ್(ಪ್ರತಿಕ್ರಿಯೆ)ಅನ್ನು ಕೊಟ್ಟಿದ್ದೇನೆ.

3. ನಾನು ಸೇವೆಯ ಮೇಲೆ ಸ್ನೇಹವನ್ನು ಇಟ್ಟುಕೊಂಡು ತಂದೆಯ ಮೇಲಿರುವ ಸ್ನೇಹವನ್ನು ಪ್ರತ್ಯಕ್ಷ ಮಾಡಿದ್ದೇನೆ.

4. ನಾನು ಲೈಟ್, ಮೈಟ್, ಮೈಕ್, ಈ ವಿಷಯಗಳಲ್ಲಿ ಶಕ್ತಿಶಾಲಿಯಾಗಿ ಪ್ರತಿ ಆತ್ಮನಿಗೆ ಶಾಂತಿ, ಸುಖ, ಪವಿತ್ರತೆಯ ಮೂರು ಕಿರಣಗಳನ್ನು ಕೊಟ್ಟಿದ್ದೇನೆ. (ಲೈಟ್:ಜ್ಞಾನದ ಪ್ರಕಾಶ, ಮೈಟ್:ಶಕ್ತಿ ಸ್ವರೂಪ, ಮೈಕ್:ವಾಚ).

5. ನಾನು ಆತ್ಮಿಕ ಪ್ರಕಾಶದಿಂದ ವಾಯುಮಂಡಲವನ್ನು ಪರಿವರ್ತನೆ ಮಾಡಿದ್ದೇನೆ.

6. ನಾನು ಮೈಕ್ ಮತ್ತು ಮೈಟ್ ಎರಡೂ ಸೇವೆಗಳನ್ನು ಜೊತೆ-ಜೊತೆಗೆ ಮಾಡಿ ಸಹಜವಾಗಿ ಸಫಲತಾ ಮೂರ್ತಿಯಾಗಿದ್ದೇನೆ.